

ಹುಬ್ಬಳ್ಳಿ: ಕೆ.ಎಲ್.ಇ ಸಂಸ್ಥೆಯ ಸಿ.ಆಯ್.ಮುನವಳ್ಳಿ ಪಾಲಿಟೆಕ್ನಿಕ್‌ನ ಪ್ರಾಚಾರ್ಯ ಪ್ರೊ ವೀರೇಶ ಬಿ. ಅಂಗಡಿಅವರಜನ್ಮದಿನ ಅಂಗವಾಗಿ ಪ್ರೊಅಂಗಡಿಅವರಿಗೆಅವರಿಗೆ ಹೊರಕೇರಿ ಮಾಸ್ತರ ಪ್ರತಿಷ್ಠಾನ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿ ಹಾಗೂ ಬಸವ ಪರಿಸರ ಸಂರಕ್ಷಣಾ ಸಮಿತಿಯ ವತಿಯಿಂದಗ್ರಂಥ ನೀಡಿ, ಮಾಲಾರ್ಪಣೆ ಮಾಡಿಆತ್ಮೀಯತೆ, ಹೃದಯದಿಂದಗೌರವಪೂರ್ವಕವಾಗಿ ಸನ್ಮಾನಿಸಲಾಯಿತು. ಜನ್ಮದಿನ ಶುಭಾಶಯಕೋರಿದರು. ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ ಕಾರ್ಯದರ್ಶಿ, ಬಸವ ಪರಿಸರ ಸಂರಕ್ಷಣಾ ಸಮಿತಿಯ ಕಾರ್ಯದರ್ಶಿ, ಕರ್ನಾಟಕಜ್ಞಾನ ವಿಜ್ಞಾನ ಸಮಿತಿಯಜಿಲ್ಲಾಘಟಕದಉಪಾಧ್ಯಕ್ಷ, ಕರ್ನಾಟಕ ವಚನ ಸಾಹಿತ್ಯ ಪರಿಷತ್‌ನಜಿಲ್ಲಾಘಟಕದಕಾರ್ಯಾಧ್ಯಕ್ಷ, ಹೊರಕೇರಿ ಮಾಸ್ತರ ಪ್ರತಿಷ್ಠಾನ ಟ್ರಸ್ಟಿ, ಗ್ರಂಥಪಾಲಕಡಾ. ಸುರೇಶ ಡಿ. ಹೊರಕೇರಿ, ಚನ್ನಬಸಪ್ಪಧಾರವಾಡಶೆಟ್ಟರ, ಶ್ರೀಶೈಲ್ ತುಂಗಳದ, ಎಸ್.ಎಫ್. ಸವದಿ, ಎನ್.ಬಿ.ಬಸಡೋಣಿ, ಟಿ.ಎಸ್.ಕರಿಕಟ್ಟಿ, ಮುಂತಾದವರು ಇದ್ದರು.

# ಹೊಸ ಐಟಿಐ ಸಂಸ್ಥೆ ಪ್ರಾರಂಭಿಸಲು ಪೋರ್ಟಲ್ ಮೂಲಕ ಅರ್ಜಿ ಆಹ್ವಾನ

ಕೊಪ್ಪಳ, ಮಾರ್ಚ್ 19 : 2024 ನೇ ಸಾಲಿನಲ್ಲಿ ಹೊಸ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಲು ಹಾಗೂ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಹೆಚ್ಚುವರಿ ವೃತ್ತಿ ಘಟಕಗಳನ್ನು ಪ್ರಾರಂಭಿಸಲು ಎನ್.ಸಿ.ವಿ.ಟಿ ಸಂಯೋಜನೆ ಪಡೆಯಲು ಮತ್ತು ಸ್ಥಳಾಂತರಗೊಂಡ ಸಂಸ್ಥೆಗಳು ಮರು ಸಂಯೋಜನೆ ಪಡೆಯುವ ಸಂಬಂಧ ಸಂಯೋಜನಾ ಪ್ರಕ್ರಿಯೆಗಳನ್ನು ಕೈಗೊಳ್ಳಲು ಡಿ.ಜಿ.ಟಿ ನವದೆಹಲಿರವರ NIMI portal (www.nimionlineadmission.in) ನಲ್ಲಿ ಅರ್ಜಿ ಸಲ್ಲಿಸಲು ತಿಳಿಸಿದೆಅರ್ಜಿ ಸಲ್ಲಿಸಬೇಕಾದಲ್ಲಿ ಸಂಸ್ಥೆಯುವರು ಡಿ.ಜಿ.ಟಿ ನಿಯಮಾನುಸಾರ ಮೂಲಭೂತ ಸೌಕರ್ಯಗಳನ್ನು ಹೊಂದಿರಬೇಕಾರುತ್ತದೆ ಹಾಗೂ ಸಂಯೋಜನೆಗಾಗಿ ನಿಮಿ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ಕಡ್ಡಾಯವಾಗಿ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯಬೇಕಾಗಿರುತ್ತದೆ.

ಹೊಸದಾಗಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಲು ಕನಿಷ್ಠ ನಾಲ್ಕು ವೃತ್ತಿಗಳಿಗೆ ಎನ್.ಸಿ.ವಿ.ಟಿ ಸಂಯೋಜನೆ ಪಡೆಯಬೇಕಾಗಿರಯತ್ತದೆ ಹಾಗೂ ಡಿಜಿಟಿ ನಿಯಮಾನುಸಾರ ಕಟ್ಟಡ,ವಿದ್ಯುತ್, ಯಂತ್ರೋಪಕರಣ, ಸಿಬ್ಬಂದಿ ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಹೊಂದಿರಬೇಕಾಗಿರುತ್ತದೆ ಮತ್ತು ಪ್ರಸ್ತುತ ಎನ್.ಸಿ.ವಿ.ಟಿ ಸಂಯೋಜನೆ ಹೊಂದಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳು ಹೆಚ್ಚುವರಿ ವೃತ್ತ/ಘಟಕಗಳನ್ನು ಪ್ರಾರಂಭಿಸಲು ಕನಿಷ್ಠ 4 ಗ್ರೇಡಿಂಗ್ ಹೊಂದಿರಬೇಕು. ಪ್ರಸ್ತುತ ಎನ್.ಸಿ.ವಿ.ಟಿ ಸಂಯೋಜನೆ ಹೊಂದಿ ಕಾರ್ಯನಿರ್ವಹಿಸುತ್ತಿರುವ ಸ್ಥಳದಿಂದ ಸಂಸ್ಥೆಯು ಬೇರೊಂದು ಸ್ಥಳಕ್ಕೆ ಸ್ಥಳಾಂತರಗೊಂಡಿದ್ದಲ್ಲಿ ಡಿ.ಜಿ.ಟಿ ನಿಯಮಾನುಸಾರ ಸಂಯೋಜನೆ ರದ್ದಾಗುತ್ತದೆ. ಈಗಾಗಲೇ ಸಂಯೋಜನೆ ಪಡೆದ ಸ್ಥಳದಿಂದ ಬೇರೊಂದು ಸ್ಥಳಕ್ಕೆ ಸ್ಥಳಾಂತರಗೊಳಿಸಿ,

ನ್ಯಾಯಾಲಯುಗಳಲ್ಲಿ ಪ್ರಕರಣ ಹೂಡಿರುವ ಸಂಸ್ಥೆಗಳು ಸ್ಥಳಾಂತರಗೊಂಡಿರುವ ಸ್ಥಳದಲ್ಲಿ ಮರು ಸಂಯೋಜನೆ ಪಡೆಯಲು ಕಡ್ಡಾಯವಾಗಿ ನಿರಾಕ್ಷೇಪಣಾ ಪತ್ರ ಪಡೆದು ಆನ್‌ಲೈನ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ಸೂಚಿಸಿದೆ. ಸ್ಥಳಾಂತರಗೊಂಡಿರುವ ಸಂಸ್ಥೆಯವರು ನಿಯಮಾನುಸಾರ ಸಂಯೋಜನೆ ಪಡೆದ ನಂತರ 2024 ನೇ ಸಾಲಿನಲ್ಲಿ ಪ್ರವೇಶಾತಿಗಳಿಗೆ ಅನುಮತಿಸಲಾಗುವುದು ಇಲ್ಲವಾದಲ್ಲಿ ಪ್ರವೇಶಾತಿಗಳಿಗೆ ಅವಕಾಶಗಳಿರುವುದಿಲ್ಲ ಹಾಗೂ ಎನ್.ಸಿ.ವಿ.ಟಿ ಸಂಯೋಜನೆಯನ್ನು ರದ್ದುಪಡಿಸಲು ಕ್ರಮವಹಿಸಲಾಗುವುದು.

ಸಂಯೋಜನೆ ಹೊಂದಲು ಡಿ.ಜಿ.ಟಿ ನಿಯಮಾನುಸಾರ ಅರ್ಹತೆ ಹೊಂದಿರುವ ಸಂಸ್ಥೆಗಳು ನಿರಾಕ್ಷೇಪಣಾ ಪತ್ರ ಪಡೆಯಲು ಮಾರ್ಚ್ 30 ರೊಳಗಾಗಿ ಆಯುಕ್ತಾಲಕ್ಕೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಪ್ರಾಚಾರ್ಯರು, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಕೊಪ್ಪಳ (ಟಣಕನಕಲ್, ಕುಷ್ಟಗಿ ರಸ್ತೆ, ಕೊಪ್ಪಳ) ಇವರನ್ನು ಸಂಪರ್ಕಿಸಬಹುದು ಎಂದು ಟಣಕನಕಲ್ ಐಟಿಐ ಸಂಸ್ಥೆಯ ಪ್ರಾಚಾರ್ಯರಾದ ಗವಿಶಂಕರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹಿರೇಹಾಳ ಚೆಕ್ ಪೋಸ್ಟ್‌ಗೆ ಅನೀರಿಕ್ಷಿತ ಭೇಟಿ ನೀಡಿದ ಸಿಇಓ ಭರತ್ ಎಸ್.



ರೋಣ : ಲೋಕಸಭಾ ಚುನಾವಣೆ 2024ರ ಹಿನ್ನೆಲೆ ಈಗಾಗಲೆ ಜಿಲ್ಲೆಯಾದ್ಯಂತ ಮಾದರಿ ನೀತಿ ಸಂಹಿತೆ ಜಾರಿಯಲ್ಲಿದೆ. ಅಕ್ರಮ ನಗದು, ಸಾಮಗ್ರಿ ತಡೆಗಾಗಿ ಜಿಲ್ಲಾ ಆಡಳಿತ ಜಿಲ್ಲಾದ್ಯಂತ 12 ಸ್ಥಳಗಳಲ್ಲಿ ಚೆಕ್ ಪೊ?ಸ್ಟಗಳನ್ನು ತೆರೆದು ಪ್ರತಿ ದಿನ ನಿರಂತರವಾಗಿ ವಾಹನಗಳ ತಪಾಸಣೆ ಜರುಗಿಸಲಾಗುತ್ತಿದೆ. ಮಂಗಳವಾರ ರೋಣ ತಾಲೂಕಿನ ಹಿರೇಹಾಳ ಚೆಕ್ ಪೊ?ಸ್ಟಗೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಭರತ್ ಎಸ್. ಅವರು ಅನೀರಿಕ್ಷಿತವಾಗಿ ಭೇಟಿ ನೀಡಿ ಪರಿಶೀಲಿಸಿದರು.ಚೆಕ್ ಪೊ?ಸ್ಟನಲ್ಲಿ ನಡೆಸಲಾಗುವ ತಪಾಸಣೆ ಕುರಿತು ಮಾಹಿತಿ ಪಡೆದ ಅವರು, ದಾಖಲೆಗಳಿಲ್ಲದೆ ನಗದು, ಸಾಮಗ್ರಿ, ಚಿನ್ನಾಭರಣ, ಮದ್ಯ ಹಾಗೂ ವಾಣಿಜ್ಯ ಸರಕುಗಳನ್ನು ವಾಹನ ಗಳಲ್ಲಿ ಸಾಗಾಟ ಮಾಡುವುದನ್ನು ಪರಿಶೀಲಿಸಬೇಕು. ದಾಖಲೆ ರಹಿತ ಸಾಮಗ್ರಿಗಳು, ನಗದು ದೊರೆತರೆ ನಿಯಮಾನುಸಾರ ಪ್ರಕರಣ ದಾಖಲಿಸುವಂತೆ ಚೆಕ್ ಪೊ?ಸ್ಟನಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿ ಸಿಬ್ಬಂದಿಗಳಿಗೆ ಸೂಚಿಸಿದರು.ಈ ಸಂದರ್ಭದಲ್ಲಿ ರೋಣ ತಾಲೂಕ ಪಂಚಾಯತ ಕಾರ್ಯ ನಿರ್ವಾಹಕ ಅಧಿಕಾರಿ ರವಿ. ಎ.ಎನ್, ಸಹಾಯಕ ನಿರ್ದೇಶಕ ರಿಯಾಜ ಖತೀಬ್, ಎಡಿಪಿಸಿ ಕಿರಣಕುಮಾರ ಸೇರಿದಂತೆ ಚೆಕ್ ಪೊ?ಸ್ಟ ಅಧಿಕಾರಿಗಳು ಸಿಬ್ಬಂದಿಗಳು ಹಾಜರಿದ್ದರು.

# ಎಸ್.ಎಸ್.ಎಲ್.ಸಿ. ಪರೀಕ್ಷೆ ವ್ಯವಸ್ಥಿತವಾಗಿ ಹಾಗೂ ಅಚ್ಚುಕಟ್ಟಾಗಿ ಜರುಗಿಸಲು ಕ್ರಮ ವಹಿಸಿ

(1 ನೇ ಪುಟದಿಂದ)

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭರತ್ ಎಸ್ ಅವರು ಮಾತನಾಡಿ ಸಮಯಕ್ಕೆ ಸರಿಯಾಗಿ ಪರೀಕ್ಷಾ ಕೇಂದ್ರಗಳಿಗೆ ತೆರಳಲು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಅಗತ್ಯ ಬಸ್ ವ್ಯವಸ್ಥೆಯನ್ನು ಕಲ್ಪಿಸಬೇಕು. ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಹಾಗೂ ಪರೀಕ್ಷಾ ಕಾರ್ಯಕ್ಕೆ ನಿಯೋಜನೆಗೊಂಡ ಅಧಿಕಾರಿ ಸಿಬ್ಬಂದಿಗಳನ್ನು ಹೊರತುಪಡಿಸಿ ಇನ್ನುಳಿದವರಿಗೆ ಪರೀಕ್ಷಾ ಕೇಂದ್ರಗಳಿಗೆ ಅವಕಾಶ ನೀಡಬಾರದು. ಪರೀಕ್ಷೆಗಳು ಶಾಂತಿಯುತವಾಗಿ ಹಾಗೂ ಸುಗಮವಾಗಿ ನಡೆಸುವುದಕ್ಕೆ ಸರ್ಕಾರದ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಸೂಚಿಸಿದರು.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಎಂ.ಎ. ರಡ್ಡೇರ ಅವರು ಮಾತನಾಡಿ ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗಳು ಮಾರ್ಚ 25 ರಿಂದ ಎಪ್ರಿಲ್ 6 ರವರೆಗೆ ಜರುಗಲಿವೆ. ಜಿಲ್ಲೆಯಲ್ಲಿ ಒಟ್ಟು 60 ಪರೀಕ್ಷಾ ಕೇಂದ್ರಗಳಿದ್ದು 16325 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಪರೀಕ್ಷೆಗಳನ್ನು ಶಾಂತಿಯುತವಾಗಿ ಹಾಗೂ ಸುವ್ಯವಸ್ಥಿತವಾಗಿ ಜರುಗಿಸಲು ಅಗತ್ಯ ಕ್ರಮ ವಹಿಸಲಾಗಿದೆ ಎಂದು ಸಭೆಗೆ ವಿವರಿಸಿದರು.ಸಭೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು, ಮಾರ್ಗಾಧಿಕಾರಿಗಳು. ಪೊಲೀಸ ಇಲಾಖೆ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

ಮಾರ್ಚ/ ಎಪ್ರಿಲ್ 2024 ರ ಎಸ್ ಎಸ್ ಎಲ್.ಸಿ ಪರೀಕ್ಷೆ ವೇಳಾಪಟ್ಟಿ. ಮಾರ್ಚ 25 ರಂದು ಬೆಳಿಗ್ಗೆ 10–15 ರಿಂದ ಮಧ್ಯಾಹ್ನ 1–30 ರವರೆಗೆ ಪ್ರಥಮ ಭಾಷೆ ; ಮಾರ್ಚ 27 ರಂದು ಬೆಳಿಗ್ಗೆ 10–15 ರಿಂದ 1–30 ರವರೆಗೆ ಸಮಾಜ ವಿಜ್ಞಾನ ; ಮಾರ್ಚ 30 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.30 ರವರೆಗೆ ವಿಜ್ಞಾನ ; ಎಪ್ರಿಲ್ 2 ರಂದು ಬೆ 10.30 ರಿಂದ ಮ 1.30 ರವರೆಗೆ ಗಣಿತ; ಎಪ್ರಿಲ್ 3 ರಂದು ಬೆ 10.15 ರಿಂದ ಮ 1.30 ರವರೆಗೆ ಅರ್ಥಶಾಸ್ತ್ರ ; ಎಪ್ರಿಲ್ 4 ರಂದು ಬೆಳಿಗ್ಗೆ 10.30 ರಿಂದ ಮ 1.30 ರವರೆಗೆ ತೃತೀಯ ಭಾಷೆ ; ಎಪ್ರಿಲ್ 6 ರಂದು ಬೆಳಿಗ್ಗೆ 10.15 ರಿಂದ ಮಧ್ಯಾಹ್ನ 1.15 ರವರೆಗೆ ದ್ವಿತೀಯ ಭಾಷೆ ಪರೀಕ್ಷೆಗಳು ಜರುಗಲಿವೆ.

# ಜಿಲ್ಲೆಯ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ : ಸಿಇಓ ರಾಹುಲ್ ರತ್ನಂ ಪಾಂಡೆಯ

(1 ನೇ ಪುಟದಿಂದ)

ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಂತೆ ಅನುಷ್ಠಾನಾಧಿಕಾರಿಗಳಿಗೆ ತಿಳಿಸಲಾಗಿದೆ. ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಪೂರೈಸಲಾಗುತ್ತಿರುವ ಕುಡಿಯುವ ನೀರಿನ ಪರೀಕ್ಷೆಯನ್ನು ನಿಯಮಿತವಾಗಿ ಕೈಗೊಳ್ಳಲು ಸಂಬಂಧಿಸಿದ ಸಿಬ್ಬಂದಿಗಳಿಗೆ ತಿಳಿಸಿ, ಪರೀಕ್ಷೆಗಳ ವರದಿಯನ್ನು ಪ್ರತಿ ದಿನ ಸಿದ್ಧಪಡಿಸಿ ಸಂಬಂಧಿಸಿದ ಗ್ರಾಮ ಪಂಚಾಯತಿಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ ರವಾನಿಸಲಾಗುತ್ತಿದೆ. ನೀರಿನ ಪರೀಕ್ಷೆಗಾಗಿ ಕೊಪ್ಪಳ ಹಾಗೂ ಕುಷ್ಟಗಿಯಲ್ಲಿ 2 ಪ್ರಯೋಗಾಲಯಗಳಿದ್ದು, ನೀರು ಬಳಕೆಗೆ ಯೋಗ್ಯವಿದ್ದರೆ ಮಾತ್ರ ನೀರು ಪೂರೈಸಲಾಗುತ್ತದೆ ಎಂದು ಅವರು ತಿಳಿಸಿದರು.

ಗ್ರಾಮ ಹಾಗೂ ತಾಲೂಕಾ ಮಟ್ಟದಲ್ಲಿ ನಿಯಮಿತವಾಗಿ ಟಾಸ್ಕ್ ಫೋರ್ಸ್ ಸಮಿತಿಯ ಸಭೆಗಳನ್ನು ಆಯೋಜಿಸಿ ಜನವಸತಿ ಪ್ರದೇಶಗಳಲ್ಲಿಯ ಕುಡಿಯುವ ನೀರಿನ ಸಮಸ್ಯೆಗಳನ್ನು ಗುರುತಿಸಿ ಪರಿಹರಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಈಗಾಗಲೇ ಸೂಕ್ತ ನಿರ್ದೇಶನ ನೀಡಲಾಗಿದೆ. ಜಿಲ್ಲೆಯ ಎಲ್ಲ ನಗರ ಸ್ಥಳೀಯ ಸಂಸ್ಥೆಗಳಲ್ಲಿ, ಗ್ರಾಮ ಪಂಚಾಯತಿ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಕುಡಿಯುವ ನೀರಿನ ಸಹಾಯವಾಣಿಗಳನ್ನು ತೆರೆಯಲಾಗಿದ್ದು, ಸಹಾಯವಾಣಿಗಳ ಸಂಖ್ಯೆಗಳನ್ನು ಜಿಲ್ಲೆಯಲ್ಲಿ ಪ್ರಚೂರ ಪಡಿಸಲಾಗಿದೆ. ಸಹಾಯವಾಣಿಗಳ ಮೂಲಕ ದಾಖಲಾದ ದೂರುಗಳನ್ನು 24 ಗಂಟೆಯೊಳಗಾಗಿ ಪರಿಹರಿಸಲು ಅಗತ್ಯ ಕ್ರಮ ವಹಿಸಲಾಗಿದೆ. ಜಿಲ್ಲೆಯಲ್ಲಿ 6366 ಖಾಸಗಿ ಬೋರ್‌ವೆಲ್‌ಗಳಿದ್ದು, ಇದರಲ್ಲಿ 898 ಬೋರ್‌ವೆಲ್‌ಗಳನ್ನು ಗುರುತಿಸಿ, ಬಾಡಿಗೆ ಪಡೆಯಲು ಕ್ರಮ ವಹಿಸಲಾಗುತ್ತಿದೆ. 150 ಬೋರ್‌ವೆಲ್‌ಗಳಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಖಾಸಗಿ ಬೋರ್‌ವೆಲ್‌ಗಳ ಬಗ್ಗೆ ಮಾಹಿತಿ ನೀಡಿದರು.

34 ವಾರಗಳವರೆಗೆ ಮೇವು ಲಭ್ಯ: ಕೊಪ್ಪಳ ಜಿಲ್ಲೆಯಲ್ಲಿ 2,94,880 ದನ ಮತ್ತು ಎಮ್ಮೆಗಳು, 7,97,945 ಕುರಿ–ಮೇಕೆಗಳಿವೆ. ಈ ಎಲ್ಲಾ ಜಾನುವಾರುಗಳಿಗೆ ಅವಶ್ಯವಿರುವ 5,10,954.04 ಟನ್ ಮೇವು ಲಭ್ಯವಿದ್ದು, ಈ ಮೇವು 34 ವಾರಗಳ ವರೆಗೆ ಬಳಕೆಯಾಗಲಿದೆ ಎಂದು ಸಿಇಓ ಅವರು ತಿಳಿಸಿದರು. ಈ ಸಂದರ್ಭ ಜಿಲ್ಲಾ ಪಂಚಾಯತಿಯ ಮುಖ್ಯ ಯೋಜನಾಧಿಕಾರಿ ಡಿ.ಮಂಜುನಾಥ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಕ್ಷೇತ್ರದಲ್ಲಿ ಅಹಿತಕರ ಘಟನೆ ನಡೆಯದಂತೆ ಸಹಕರಿಸಿ, ಕಡ್ಡಾಯ ಮತದಾನ ಮಾಡುವಂತೆ ಎಲ್ಲರೂ ಶ್ರಮಿಸಿ ಹಬ್ಬ ಆಚರಿಸೋಣ: ಸತೀಶ್



ಸಂಡೂರು: ಮಾ:19 : ಸಂಡೂರು ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 2,30,320ಮತದಾರರಿದ್ದು ಅದರಲ್ಲಿ 1,14,952 ಪುರುಷ , 1,15,345 ಮಹಿಳಾ ಹಾಗೂ 25 ತೃತೀಯ ಲಿಂಗ ಮತದಾರರಿದ್ದು ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಎಲ್ಲರ ಸಹಕಾರದಿಂದ ಶಾಂತಿಯುತವಾದಿ ಚುನಾವಣಾ ಹಬ್ಬವನ್ನು 07.05.2024 ರಂದು ಪ್ರತಿಯೊಬ್ಬರೂ ಮತಗಟ್ಟೆಗೆ ಮತ ಹಾಕುವ ಮೂಲಕ ಹಬ್ಬವನ್ನು ಆಚರಿಸೋಣ ಎಂದು ಸಹಾಯಕ ಚುನಾವಣಾಧಿಕಾರಿ ಸತೀಶ್ ತಿಳಿಸಿದರು.

ಅವರು ಇಂದು ಪಟ್ಟಣದ ತಾಲೂಕು ಕಛೇರಿಯಲ್ಲಿ ಚುನಾವಣೆ ನೀತಿ ಸಂಹಿತೆ ಘೋಷಣೆಯಾದ ಹಿನ್ನಲೆಯಲ್ಲಿ ಎಲ್ಲಾ ಪಕ್ಷಗಳ ಪ್ರತಿನಿಧಿಗಳು ಮತ್ತು ಪತ್ರಕರ್ತರ ಸಭೆಯನ್ನು ಉದ್ದೇಶಿಸಿ ಮಾತನಾಡಿ ತಾಲೂಕಿನಾದ್ಯಂತ ಒಟ್ಟು 253 ಮತಗಟ್ಟೆಗಳನ್ನು ಸ್ಥಾಪಿಸಿದ್ದು ಅದರಲ್ಲಿ 55 ಸೂಕ್ಷ್ಮ ಮತಗಟ್ಟೆಗಳನ್ನು ಗುರುತಿಸಲಾಗಿದೆ, ನಗರ ವ್ಯಾಪ್ತಿಯಲ್ಲಿ 12, ಗ್ರಾಮೀಣ ವ್ಯಾಪ್ತಿಯಲ್ಲಿ 43 ಮತಗಟ್ಟೆಗಳು, ಒಟ್ಟು 20 ಸೆಕ್ಟರ್‌ಗಳಿದ್ದು ತಾಲೂಕಿನಾದ್ಯಂತ ಒಟ್ಟು 3237 ಅಂಗವಿಕಲ ಮತದಾರರಿದ್ದಾರೆ, 85+ ಮೇಲ್ಪಟ್ಟವರು ಒಟ್ಟು 1985 ಮತದಾರರಿದ್ದಾರೆ, ಅದರಲ್ಲಿ ಸೇವಾ ಮತದಾರರು 58( ಮಿಲಟರಿ, ಇತರೆ) ಇದ್ದಾರೆ, ಈ ಬಾರಿ ಪೋಸ್ಟಲ್ ಬ್ಯಾಲೆಟ್ ಜೊತೆಗೆ ನೇರ ಚುನಾವಣಾ ಪತ್ರ ಪಡೆದು ತಮ್ಮದೇ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ ಯಾವುದೇ ಬೂತನಲ್ಲಿ ಮತ ಚಲಾಯಿಸುವ ಹಕ್ಕನ್ನು ನೀಡಲಾಗುತ್ತಿದೆ ಎಂದರು.

ತಾಲೂಕಿನಾದ್ಯಂತ ಒಟ್ಟು 4 ಚೆಕ್ ಪೋಸ್ಟಗಳನ್ನು ಸ್ಥಾಪಿಸಲಾಗಿದೆ, 2 ಅಂತರಾಜ್ಯ ಚೆಕ್ ಪೋಸ್ಟ್‌ಗಳು 1 ಜಿ.ಬಸಾಪುರ, 2 ಗಂಗಾಲಾಪುರ, ಅಂತರ ಜಿಲ್ಲಾ ಚೆಕ್ ಪೋಸ್ಟ್‌ನ್ನು ಮೋತಲಕುಂಟಾದಲ್ಲಿ ಸ್ಥಾಪಿಸಲಾಗಿದೆ, ಮತ್ತೊಂದು ದಿಕ್ಕಲದಿನ್ನಿ ಹಾಗೂ ಜಿಂದಾಲ್ ಏರ್ಪೋರ್ಟನಲ್ಲಿಯೂ ಸಹ ಸ್ಥಾಪಿಸಲಾಗಿದೆ ಒಟ್ಟು ಎಫ್.ಎಸ್.ಟಿ. 3 ತಂಡ, ಎಸ್.ಎಸ್.ಟಿ. 4 ತಂಡ, ವಿ.ವಿ.ಟಿ. 3 ತಂಡ ಹಾಗೂ ವಿ.ಎಸ್.ಟಿ. 3 ತಂಡಗಳು ಕ್ಷೇತ್ರಾದ್ಯಂತ ಕಾರ್ಯನಿರ್ವಹಿಸಲಿವೆ, ಅದ್ದರಿಂದ ಯಾವುದೇ ರಾಜಕೀಯ ಪಕ್ಷವು ಚುನಾವಣಾ ಪ್ರಚಾರದಲ್ಲಿ ಅಕ್ರಮವಾಗಿ ಕಾರ್ಯನಿರ್ವಹಿಸಬಾರದು ಮೊದಲೆ ಪರವಾನಿಗೆ ಪಡೆಯಬೇಕು, ಅತಿ ದೊಡ್ಡ ಪ್ರಚಾರ ಸಭೆಗೆ ನೇರ ಜಿಲ್ಲಾಧಿಕಾರಿ ( ಚುನಾವಣಾಧಿಕಾರಿ)ಗಳಿಂದ ಪರವಾನಗೆ ಪಡೆಯಬೇಕು, ಚುನಾವಣೆ ಪ್ರಚಾರವನ್ನು ಯಾವುದೇ ಧರ್ಮ, ಜಾತಿ, ಮತ, ಪಂಥದ ಅಡಿಯಲ್ಲಿ ಮತಯಾಚನೆ ಮಾಡಬಾರದು, ವೈಯಕ್ತಿಕ ನಿಂದನೆ, ವ್ಯಕ್ತಿ ನಿಂದನೆ ಮಾಡುವಂತಿಲ್ಲ, ತಮ್ಮ ಸಾಧನೆಗಳನ್ನು, ತಾವು ಮಾಡುವ ಸಾಧನೆಗಳನ್ನು ಮತದಾರರಿಗೆ ತಿಳಿಸುವ ಮೂಲಕ ಮತ ಯಾಚನೆ ಮಾಡಬೇಕು, ಮಕ್ಕಳನ್ನು ಪ್ರಚಾರ ಕಾರ್ಯದಲ್ಲಿ ಬಳಸುವಂತಿಲ್ಲ ಕಂಡು ಬಂದಲ್ಲಿ ಕ್ರಮವಹಿಸಲಾಗುವುದು, ಅಕ್ರಮವಾಗಿ ಯಾವುದೇ ರೀತಿಯ ಹಣ ಸಾಗಾಣಿಕೆ ಕಂಡುಬಂದಲ್ಲಿ ಕ್ರಮವಹಿಸಲಾಗುವುದು ಯಾರೂ ಸಹ 50 ಸಾವಿರಕ್ಕಿಂತ ಮೇಲ್ಪಟ್ಟು ಹಣ ಸಿಕ್ಕಲ್ಲಿ ಅದಕ್ಕೆ ಪೂರಕ ದಾಖಲೆ ಕಡ್ಡಾಯ ಇಲ್ಲವಾದಲ್ಲಿ ಶಿಸ್ತು ಕ್ರಮ, ಮದುವೆಗಳನ್ನು ಮಾಡಲು ಯಾವುದೇ ಅಡ್ಡಿ ಅತಂಕಗಳು ಇಲ್ಲ ಅದರೆ ಅಲ್ಲಿ ಯಾವುದೇ ಪಕ್ಷ ಅಥವಾ ವ್ಯಕ್ತಿ ಪ್ರಚಾರ ನಡೆಸುವಂತಿಲ್ಲ ಚುನಾವಣಾ ನೋಫೀಕೇಷನ್ ದಿನಾಂಕ: 12.04.2024 ರಂದು ಪ್ರಕಟ ನಾಮಪತ್ರ ಸಲ್ಲಿಸಲು 19.4.2024, ನಾಮಪತ್ರ ಪರಿಶೀಲನೆ 20.4.2024, ನಾಮಪತ್ರ ಹಿಂಪಡೆಯಲು 22.04.2024, ಮತದಾನ 07.05.2024ರಂದು ನಡೆಯಲಿದೆ ಚುನಾವಣೆಯ ಎಲ್ಲಾ ಕಾರ್ಯನಿರ್ವಹಣೆಗೆ ಸರ್ಕಾರಿ ಪ್ರಥಮದರ್ಜೆ ಕಾಲೇಜನ್ನು ಪಡೆದುಕೊಳ್ಳಲಾಗಿದೆ, ಅಲ್ಲಿಯೇ ತರಬೇತಿ, ಮಾಸ್ಟರಿಂಗ್, ಡಿಮಾಸ್ಟರಿಂಗ್, ಸ್ಟಾಂಗ್ ರೂಂ ನಿರ್ಮಿಸಲಾಗಿದೆ ಶಾಂತಿ ಹಾಗೂ ಸಹಕಾರದಿಂದ ಹಬ್ಬವಾಗಿ ಚುನಾವಣೆಯನ್ನು ನಡೆಸೋಣ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಅನಿಲ್ ಕುಮಾರ್, ಅಧಿಕಾರಿ ಶಿವಕುಮಾರ್ ಹಾಗೂ ಕಾಂಗ್ರೇಸ್ ಪಕ್ಷದ ಅಧ್ಯಕ್ಷ ಸತೀಶ್.ಚಿತ್ರಿಕಿ, ಬಿ.ಜೆ.ಪಿ ಪಕ್ಷದಿಂದ ದರೋಜಿ ರಮೇಶ್, ಕೆ.ಅರ್.ಎಸ್. ಹೊನ್ನೂರಸ್ವಾಮಿ, ಇತರ ಪಕ್ಷಗಳ ಮುಖಂಡರು ಇದ್ದು ನಮಗೆ ಸರಿಯಾದ ಸಭೆಯ ಮಾಹಿತಿ ಇಲ್ಲ ನೇರ ಪೋನ್ ಮಾಡಿ ತಿಳಿಸಿ ಎಂದು ಚುನಾವಣಾಧಿಕಾರಿಗಳಿಗೆ ತಿಳಿಸಿದರು, ಅದಕ್ಕೆ ಅಧಿಕಾರಿಗಳು ಮುಂದೆ ಈ ರೀತಿಯಾಗದಂತೆ ನೋಡಿಕೊಳ್ಳುವ ಬಗ್ಗೆ ಮಾಹಿತಿ ನೀಡಿದರು.

# ಮೌಲಾನಾ ಆಜಾದ್ ಮಾದರಿ ಆಂಗ್ಲ ಮಾಧ್ಯಮ ಶಾಲೆ ಪ್ರವೇಶಕ್ಕೆ ಅರ್ಜಿ ಆಹ್ವಾನ

ಕೊಪ್ಪಳ, ಮಾರ್ಚ್ 19 : 2024–25 ನೇ ಸಾಲಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಜಿಲ್ಲೆಯಲ್ಲಿ ನಿರ್ವಹಣೆಯಾಗುತ್ತಿರುವ ಅಲ್ಪಸಂಖ್ಯಾತರ ಮೌಲಾನಾ ಆಜಾದ್ ಮಾದರಿ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ 6ನೇ ತರಗತಿಯ ಪ್ರವೇಶವನ್ನು ನೀಡಲು ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

ಪ್ರತಿ ಶಾಲೆಯಲ್ಲಿ ದಾಖಲಾತಿ 60 ಸೀಟುಗಳು ಮಾತ್ರ ಇದ್ದು, ಪೋಷಕರು/ವಿದ್ಯಾರ್ಥಿಗಳು ನೇರವಾಗಿ ಎಲ್ಲಾ ದಾಖಲೆಗಳೊಂದಿಗೆ ಆಯಾ ಮೌಲಾನಾ ಆಜಾದ್ ಶಾಲೆಯ ಮುಖ್ಯೋಪಾಧ್ಯಾಯರಿಗೆ ಸಂಪರ್ಕಿಸಿ ಏಪ್ರಿಲ್ 16 ರೊಳಗೆ ಅರ್ಜಿ ಸಲ್ಲಿಸಬೇಕು.

ಅಲ್ಪಸಂಖ್ಯಾತರ ಮೌಲಾನಾ ಆಜಾದ್ ಮಾದರಿ ಆಂಗ್ಲ ಮಾಧ್ಯಮ ಶಾಲೆ, ಸರ್ದಾರಗಲ್ಲಿ, ಕೊಪ್ಪಳ – 9900617290, ದಿಡ್ಡಿಕೇರಾ ಓಣಿ, ಕೊಪ್ಪಳ–9900617290, ಮುನಿರಾಬಾದ್ ? 9902168996, ಲಕ್ಷಿ ?ಮೇ ಕ್ಯಾಂಪ್, ಗಂಗಾವತಿ ? 9880026927, ಕನಕಗಿರಿ–9611024212, ಕಾರಟಗಿ ? 8073548574, ತಾವರಗೇರಾ ? 8746812318, ಯಲಬುರ್ಗಾ ? 6363331628, ಕುಕನೂರು ? 7829041942 ಶಾಲೆಗಳಿಗೆ ಸಂಪರ್ಕಿಸಿ ಅರ್ಜಿ ಸಲ್ಲಿಸಬಹುದು.

ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಡಾ॥ಎ.ಪಿ.ಜೆ.ಅಬ್ದುಲ್ ಕಲಾಂ ವಸತಿ ಶಾಲೆಯಲ್ಲಿ ಶೇ.75 ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಮತ್ತು ಶೇ.25 ಇತರೆ ವರ್ಗದವರಿಗೆ ಮೀಸಲಿಡಲಾಗಿದೆ. ಅಲ್ಪಸಂಖ್ಯಾತರ ವರ್ಗದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ಹಾಗೂ ಪ್ರವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ 2.50 ಲಕ್ಷ ಮಿತಿಯೊಳಗಿರಬೇಕು. ಹಿಂದುಳಿದ ವರ್ಗಗಳ 2ಎ, 3ಎ ಮತ್ತು 3ಬಿ ಅಭ್ಯರ್ಥಿಗಳ ಹಾಗೂ ಪ್ರವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ 2.50 ಲಕ್ಷ ಮಿತಿಯೊಳಗಿರಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ 2.50 ಲಕ್ಷ ಮಿತಿಯೊಳಗಿರಬೇಕು. ಅಂಗವಿಕಲ ವಿದ್ಯಾರ್ಥಿಗಳಿಗೆ ಶೇ.05, ಮಾಜಿ ಸೈನಿಕರಿಗೆ ಶೇ. 04 ಕಾಯ್ದಿರಿಸಲಾಗಿದೆ. ವಿಶೇಷ ದುರ್ಬಲ ವರ್ಗ ಶೇ.05, ಸಫಾಯಿ ಕರ್ಮಚಾರಿ ವಿದ್ಯಾರ್ಥಿಗಳಿಗೆ ಶೇ. 05 ಕಾಯ್ದಿರಿಸಲಾಗಿದೆ. ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳು 5 ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.

ಭರ್ತಿ ಮಾಡಿದ ಅರ್ಜಿಯೊಂದಿಗೆ ಕಂದಾಯ ಇಲಾಖೆಯ ತಹಶೀಲ್ದಾರ ನೀಡಿದ ಜಾತಿ ಮತ್ತು ಆದಾಯ ದೃಢೀಕರಣ ಪ್ರಮಾಣ ಪತ್ರ, ವಾಸಸ್ಥಳ ಪ್ರಮಾಣ ಪತ್ರ, ಆಧಾರ್ ಕಾರ್ಡ್ ಹಾಗೂ ವಿದ್ಯಾರ್ಥಿ ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ 4 ಭಾವಚಿತ್ರಗಳೊಂದಿಗೆ ಮತ್ತು ನಗದಿ ಪಡಿಸಿದ ದಿನಾಂಕದೊಳಗಾಗಿ ಅರ್ಜಿಯನ್ನು ಸಲ್ಲಿಸಬೇಕು. ಅಪೂರ್ಣವಾದ ಮತ್ತು ತಡವಾಗಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕಿನ ಹತ್ತಿರದ ಮೌಲಾನಾ ಆಜಾದ್ ಮಾದರಿ ಶಾಲೆ/ ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ, ಅಥವಾ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕೊಪ್ಪಳ ದೂ.ಸಂ: 08539–225070 ಗೆ ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಿಲ್ಲಾ ಗ್ರಾಹಕರ ಆಯೋಗದಿಂದ ಸೂಚನೆ

ಕೊಪ್ಪಳ, ಮಾರ್ಚ್ 19 : ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ನಿರ್ದಿಷ್ಟ ಅವಧಿ ಮೀರಿದ ಕಡತಗಳನ್ನು ನಾಶಪಡಿಸುವಂತೆ ಸುತ್ತೋಲೆಯನ್ನು ಹೊರಡಿಸಿದ್ದು, ಈ ಕುರಿತು ಕ್ರಮ ತೆಗೆದುಕೊಳ್ಳಬೇಕಾಗಿರುವುದರಿಂದ ಪಕ್ಷಕಾರರ ಹಾಗೂ ನ್ಯಾಯವಾದಿಗಳ ಯಾವುದಾದರೂ ಮೂಲ ದಾಖಲೆ, ಇನ್ನಿತರೆ ದಾಖಲೆಗಳು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ಇದ್ದರೆ, ಅದನ್ನು ಹಿಂಪಡೆಯುವಂತೆ ತಿಳಿಸಿದೆ.

ರಾಜ್ಯ ಆಯೋಗದ ಸುತ್ತೋಲೆಯ ಅನುಸಾರ ಮತ್ತು ಗ್ರಾಹಕರ ಸಂರಕ್ಷಣಾ ರೆಗ್ಯೂಲೇಶನ್–2005ರ ನಿಯಮ 20(1) ರಿಂದ (5)ರವರೆಗೆ ಇರುವ ನಿಯಮಗಳನ್ನು ಅನುಸರಿಸಿಕೊಂಡು ಕೊಪ್ಪಳ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ಜನವರಿ–2016ರಿಂದ ಡಿಸೆಂಬರ್–2018ರವರೆಗೆ ದಾಖಲಾಗಿ ಡಿಸೆಂಬರ್–2023ರ ಅಂತ್ಯಕ್ಕೆ ವಿಲೇಗೊಂಡು 05 ವರ್ಷ ಅವಧಿ ಮೀರಿದ ಗ್ರಾಹಕರ ಪ್ರಕರಣಗಳು ಮತ್ತು ಜನೇವರಿ–2018ರಿಂದ ಡಿಸೆಂಬರ್–2020ರವರೆಗೆ ದಾಖಲಾಗಿ ಡಿಸೆಂಬರ್–2023ರ ಅಂತ್ಯಕ್ಕೆ ವಿಲೇಗೊಂಡು 03 ವರ್ಷ ಅವಧಿ ಮೀರಿದ ಅಮಲ್ ಜಾರಿ (ಎಕ್ಷಿಕ್ಯೂಶನ್ ಅರ್ಜಿಗಳು (ಇ.ಎ.))ಪ್ರಕರಣಗಳ ಕಡತಗಳನ್ನು ಯಾವುದೇ ಪಾವತಿಗಾಗಿ ಬಾಕಿ ಇಲ್ಲದೇ ಇರುವಂತಹ ಕಡತಗಳು ಹಾಗೂ ಯಾವುದೇ ಮೇಲ್ಮನವಿ, ರಿಟ್ ಅರ್ಜಿ, ಪುನರ್ ಪರಿಶೀಲನಾ ಅರ್ಜಿಗಳು ಮತ್ತು ಯಾವುದೇ ತಡೆಯಾಜ್ಞೆಗಳು ಬಾಕಿ ಇಲ್ಲದೇ ಇರುವಂತಹ ಪ್ರಕರಣಗಳ ಕಡತಗಳನ್ನು ನಾಶಪಡಿಸಲು ಕ್ರಮ ವಹಿಸಬೇಕಾಗಿದೆ. ಆದುದರಿಂದ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಹಳೆ ಸಿವಿಲ್ ನ್ಯಾಯಾಲಯದ ಕಟ್ಟಡ, ಜವಾಹರ ರೋಡ್, ಕೊಪ್ಪಳ–583231ರಲ್ಲಿ ಕಚೇರಿಯಲ್ಲಿ ಮೇಲೆ ತಿಳಿಸಿದ ಅವಧಿಯ ಹಾಗೂ ಪ್ರಕರಣಗಳ ಕಡತಗಳಲ್ಲಿ ಮೂಲ ದಾಖಲೆಗಳು ಅಥವಾ ಇನ್ನಿತರ ಯಾವುದೇ ದಾಖಲೆಗಳು ಇದ್ದಲ್ಲಿ ಹಿಂಪಡೆಯಲು ಮತ್ತು ಪ್ರಕರಣಗಳಲ್ಲಿ ಹಣ ಪಾವತಿ ಬಾಕಿಗೆ ಸಂಬಂಧಿಸಿದ ಪಕ್ಷಕಾರರು ಅಥವಾ ನ್ಯಾಯವಾದಿಗಳು ಈ ಜಿಲ್ಲಾ ಗ್ರಾಹಕರ ಆಯೋಗವು ಪ್ರಕಟಣೆ ಹೊರಡಿಸಿದ ದಿನಾಂಕದಿಂದ 30 ದಿವಸಗಳೊಳಗಾಗಿ ಜಿಲ್ಲಾ ಗ್ರಾಹಕರ ಆಯೋಗಕ್ಕೆ ಖುದ್ದಾಗಿ ಹಾಜರಾಗಿ ಅರ್ಜಿಯನ್ನು ಸಲ್ಲಿಸಿ ಪಡೆದುಕೊಳ್ಳಬೇಕು. ತಪ್ಪಿದಲ್ಲಿ ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬೆಂಗಳೂರು ಇವರ ಸುತ್ತೋಲೆಯನ್ವಯ ಮೇಲ್ಕಂಡ ಅವಧಿಯ ಪ್ರಕರಣಗಳನ್ನು ನಾಶಪಡಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಗ್ರಾಹಕರ ಆಯೋಗದ ಸಹಾಯಕ ರಿಜಿಸ್ಟ್ರಾರ್ ಹಾಗೂ ಸಹಾಯಕ ಆಡಳಿತಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸರ್ವತೋಮುಖ ಬೆಳವಣಿಗೆಗೆ ಕೊಪ್ಪಳ ವಿಶ್ವ ವಿದ್ಯಾಲಯದ ಸನ್ನದ್ಧ: ಕುಲಪತಿ ಮೇತ್ರಿ

(1 ನೇ ಪುಟದಿಂದ)

ಹಾಸನ ವಿಶ್ವ ವಿದ್ಯಾಲಯದ ಕುಲಪತಿಗಳಾದ ಪ್ರೊ.ತರೀಕೆರಿ ಸಿ. ತಾರಾನಾಥ ಮಾತನಾಡಿ, ಕೊಪ್ಪಳ ನಾಡು ಕಲ್ಯಾಣ ಕರ್ನಾಟಕದಲ್ಲಿ ಪ್ರಸಿದ್ಧಿ ಪಡೆದಿದೆ. ಜ್ಞಾನ ಎಲ್ಲರಿಗೂ ಸಿಗಬೇಕು. ಮನುಷ್ಯನ ಕ್ರಿಯೆಗೆ ಸೂರ್ಯನ ಶಕ್ತಿ ಆಧಾರವಾಗಿದೆ. ವಿಕಾಸದ ಹಾದಿಯಲ್ಲಿ ವಿವಿಧ ಸಂಘರ್ಷವನ್ನು ಎದುರಿಸಿ ಮನುಷ್ಯ ಮುಂದು ವರೆದಿದ್ದಾನೆ. ಮನುಷ್ಯನ ಮಾತ್ರ ಸಂವಹನ ಕಲೆ ಹಾಗೂ ಬುದ್ಧಿ ಶಕ್ತಿ ಇರುವುದು ಎಂದರು.

ಚಾಮರಾಜನಗರ ವಿಶ್ವ ವಿದ್ಯಾಲಯದ ಕುಲಪತಿಗಳಾದ ಪ್ರೊ. ಎಮ್.ಆರ್.ಗಂಗಾಧರ್ ಮಾತನಾಡಿ, ನೂತನ ವಿಶ್ವ ವಿದ್ಯಾಲಯದಿಂದ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಅನುಕೂಲವಾಗಿವೆ. ವಿಶೇಷ ಹೆಣ್ಣು ಮಕ್ಕಳನ್ನು ನಗರಗಳಿಗೆ ಉನ್ನತ ಶಿಕ್ಷಣ ಪಡೆಯಲು ಅವರ ಪಾಲಕರು ನಿರಾಕರಿಸುವುದು ಸಹಜವಾಗಿದೆ. ಆದರೆ ನೂತನ ವಿಶ್ವ ವಿದ್ಯಾಲಯದ ಜಿಲ್ಲೆಯ ಸ್ಥಾಪನೆ ಯಾಗವುದರಿಂದ ಇಲ್ಲಿನ ವಿದ್ಯಾರ್ಥಿಗಳಿಗೆ ಹಾಗೂ ಹೆಣ್ಣು ಮಕ್ಕಳು ಉನ್ನತ ಶಿಕ್ಷಣದ ಕನಸು ನನಸಾಗಿದೆ ಎಂದರು.

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲ ಸಚಿವರಾದ ಎಸ್.ಎನ್.ರುದ್ರೇಶ ಮಾತನಾಡಿ, ಜಾತಿ ಧರ್ಮದಲ್ಲಿ ವಿಶ್ವ ವಿದ್ಯಾಲಯಗಳು ಸೋರುಗುತ್ತಿವೆ. ಜಾತಿ ಧರ್ಮವನ್ನು ಮಕ್ಕಳು ಹೊರ ಬರಬೇಕು ಎಂದರು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಕೊಪ್ಪಳ ವಿಶ್ವ ವಿದ್ಯಾಲಯದ ಕುಲಪತಿಗಳಾದ ಪ್ರೊ.ಬಿ.ಕೆ.ರವಿ ಮಾತನಾಡಿ, ಕಳೆದ ಒಂದು ವರ್ಷದಿಂದ ಇಲ್ಲಿನ ಜನತೆ ಅನೇಕ ರೀತಿ ಪ್ರೋತ್ಸಾಹ ಹಾಗೂ ಸಹಕಾರ ನೀಡಿದಾರೆ. ಕೊಪ್ಪಳ ವಿಶ್ವ ವಿದ್ಯಾಲಯ ಬೆಳೆಯ ಬೇಕು ಎಂದರೆ ಜನ ಸಮುದಾಯದ ಸಹಕಾರ ಅಗತ್ಯ. ವಿಶ್ವ ವಿದ್ಯಾಲಯವನ್ನು ಬಲಿಷ್ಠ ಗೊಳಿಸೋಣ. ವಿಶ್ವ ವಿದ್ಯಾಲಯದಲ್ಲಿ ಒಂದು ಕುಟುಂಬ ದ್ದಂತೆ ಕೆಲಸ ಮಾಡುತ್ತಿದ್ದೇವೆ.ಕಲ್ಯಾಣ ಭಾಗವನ್ನು ಉತ್ತುಂಗಕ್ಕೆ ಏರುವ ಮಾಡೋಣ ಎಂದರು.ಕುಲ ಸಚಿವರಾದ ಡಾ.ಕೆ.ವಿ.ಪ್ರಸಾದ್, ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾದ ಡಾ.ಸಿ.ಐ.ಚಲವಾದಿ, ಡಾ.ಪ್ರಕಾಶ ಯಳವಟ್ಟಿ, ಡಾ.ಬಾಜಿ ದೇವೇಂದ್ರಪ್ಪ, ವಿಶ್ವ ವಿದ್ಯಾಲಯದ ವ್ಯಾಪ್ತಿಯ ಕಾಲೇಜಿನ ಪ್ರಾಚಾರ್ಯರು, ಪ್ರಾಧ್ಯಾಪಕರು, ಭೋಧಕ, ಬೋಧಕೇತರ ಸಿಬ್ಬಂದಿಗಳು, ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು ಇದ್ದರು.